ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 05-12-1970.

*<u>ಪ್ರತಿಜ್ಞೆ ಮಾಡುವವರಿಗೆ ಮಾಯೆಯ ಸವಾಲು</u>* (प्रतिज्ञा करने वालों को माया की चैलेंज)

ಶಬ್ದದಿಂದ ದೂರ ಹೋಗುವುದು ಮತ್ತು ಕರೆದುಕೊಂಡು ಹೋಗಲು ಬರುತ್ತದೆಯೇ? ಯಾವಾಗ ಬೇಕೋ ಆಗ ಶಬ್ದದಲ್ಲಿ ಬರುವುದು, ಯಾವಾಗ ಬೇಕೋ ಆಗ ಶಬ್ದದಿಂದ ದೂರವಾಗುವುದು, ಈ ರೀತಿಯ ಸಹಜ ಅಭ್ಯಾಸಿಯಾಗಿರುವಿರಾ? ಈ ಪಾಠವನ್ನು ಪಕ್ಕಾ ಮಾಡಿರುವಿರಾ? ವಿಜಯಿರತ್ನವಾಗಿದ್ದೀರಾ? ಯಾರ ಮೇಲೆ ವಿಜಯಿಯಾಗಿದ್ದೀರಿ? ಸರ್ವರ ಹೃದಯದ ಮೇಲೆ ವಿಜಯ ಮಾಡಿಕೊಳ್ಳುವಿರಾ? ಹೇಗೆ ಬಾಪ್ ದಾದಾರ ಈ ಕರ್ತವ್ಯದ ಗುಣದ ಸ್ಮೃತಿಚಿಹ್ನೆ ಇಲ್ಲಿದೆಯೋ ಹಾಗೆ ತಂದೆಯ ಸಮಾನ ವಿಜಯಿಯಾಗಿರುವಿರಾ? ಸರ್ವರ ಮೇಲೆ ವಿಜಯಿಯಾಗಿದ್ದೀರಾ? ಅಥವಾ ತಮ್ಮ ಮೇಲೆ ಮತ್ತ್ಯಾರಾದರೂ ವಿಜಯಿಯಾಗಬಹುದೇ? ಇಂತಹ ಸ್ಥಿತಿಯನ್ನು ಭಟ್ಟಿಯಲ್ಲಿ ಮಾಡಿಕೊಂಡಿರುವಿರಾ? ಭಟ್ಟಿಯಿಂದ ಹೋದ ಮೇಲೆ ಪ್ರಾಕ್ಟಿಕಲ್ ಪರೀಕ್ಷೆಯಾಗುವುದು. ಗೌರವಯುತವಾಗಿ ತೇರ್ಗಡೆಯಾಗುವುದು ಎಂದರೆ ಸಂಕಲ್ಪದಲ್ಲಿಯೂ ಫೇಲ್ ಆಗಬಾರದು, ಈ ರೀತಿ ಆಗಿರುವಿರಾ? ಆಗಲಿ ಎಂಬ ಘೋಷಣೆಯನ್ನು ಬಹಳ ಚೆನ್ನಾಗಿ ಮಾಡುತ್ತೀರಿ ಎಂದು ನಿನ್ನೆ ಸಮಾಚಾರ ಕೇಳಿದೆವು. ಈ ರೀತಿ ಪ್ರತಿಜ್ಞೆ ಮಾಡುವವರು ಗೌರವಯುತವಾಗಿ ತೇರ್ಗಡೆಯಾಗಬೇಕು. ಪ್ರತಿಜ್ಞೆ ಮಾಡುವವರ ಬಹಳ ಪ್ರಾಕ್ಟಿಕಲ್ ಪರೀಕ್ಷೆಯನ್ನು ತೆಗೆದುಕೊಳ್ಳಬೇಕೆಂದು ಮಾಯೆಯ ಸವಾಲ್ ಇದೆ. ಎದುರಿಸುವ ಶಕ್ತಿ ಸದಾ ತಮ್ಮಲ್ಲಿ ಕಾಯಂ ಇಟ್ಟುಕೊಳ್ಳಬೇಕು. ಅಷ್ಟಶಕ್ತಿಗಳನ್ನು ಹೇಳಿದ್ದೆವು, ಅವುಗಳನ್ನು ಧಾರಣೆ ಮಾಡಿರುವಿರಾ? ಜ್ಞಾನಮೂರ್ತಿ, ಗುಣಮೂರ್ತಿ ಎರಡೂ ಆಗಿರುವಿರಾ? ಮಾಯೆಗೆ ಚೆನ್ನಾಗಿ ಸದಾಕಾಲದ ವಿದಾಯಿಯನ್ನು ಕೊಟ್ಟು ಹೋಗುತ್ತಿರುವಿರಾ? ತಮ್ಮ ಸ್ಥೂಲ ವಿದಾಯದ ಮೊದಲು ಮಾಯೆಗೆ ವಿದಾಯವನ್ನು ಕೊಡಬೇಕು. ಮಾಯೆಯೂ ಬಹಳ ಚತುರವಾಗಿದೆ. ಒಮ್ಮೊಮ್ಮೆ ಯಾರಾದರೂ ಶರೀರವನ್ನು ಬಿಟ್ಟಾಗ ಶ್ವಾಸ ನಿಲ್ಲುತ್ತದೆ ಮತ್ತು ಎಲ್ಲರೂ ಇವರು ಸತ್ತರೆಂದು ತಿಳಿಯುತ್ತಾರೆ ಆದರೆ ಶ್ವಾಸ ಮತ್ತೆ ಶುರುವಾಗುತ್ತದೆ ಅದೇ ರೀತಿ ಮಾಯೆ ತನ್ನ ಅತಿ ಸೂಕ್ಷ್ಮ ರೂಪವನ್ನೂ ಧಾರಣೆ ಮಾಡುತ್ತದೆ. ಆದ್ದರಿಂದ ಡಾಕ್ಟರ್ ಶ್ವಾಸ ನಿಂತುದನ್ನು ಸರಿಯಾಗಿ ಪರಿಶೀಲಿಸುತ್ತಾರೆ. ಅದೇ ರೀತಿ ಮೂರನೆಯ ಕಣ್ಣಿನಿಂದ ಸರಿಯಾಗಿ ತಮ್ಮ ಪರಿಶೀಲನೆ ಮಾಡಿಕೊಳ್ಳಬೇಕು. ಆಮೇಲೆ ಈ ಮಾತಿನ ಬಗೆಗೆ ನಮಗೆ ಇಂದೇ ಗೊತ್ತಾಗಿದೆ ಎಂದು ಹೇಳುವುದಲ್ಲ. ಆದ್ದರಿಂದ ಬಾಪ್ ದಾದಾ ಮೊದಲೇ ಎಚ್ಚರಿಕೆಯನ್ನು ಕೊಟ್ಟು ಹುಶಾರ್ ಮಾಡುತ್ತಿದ್ದಾರೆ. ಏಕೆಂದರೆ ಪ್ರತಿಜ್ಞೆ ಮಾಡಿರುವಿರಿ, ಯಾವ ಸ್ಥಾನದಲ್ಲಿ ಪ್ರತಿಜ್ಞೆ ಮಾಡಿರುವಿರಿ? ಯಾರ ಮುಂದೆ ಮಾಡಿರುವಿರಿ? ಈ ಎಲ್ಲಾ ಮಾತುಗಳನ್ನು ನೆನಪಿಡಿ, ಪ್ರಾಪ್ತಿಯಾಯಿತು ಆದರೆ ಪ್ರಾಪ್ತಿಯ ಜೊತೆಗೆ ಏನು ಮಾಡಬೇಕು? ಎಲ್ಲವೂ ತೃಪ್ತವಾಗುವಂತೆ ಪ್ರಾಪ್ತಿ ಮಾಡಿಕೊಂಡಿರಾ? ಎಷ್ಟು ತೃಪ್ತರಾಗುವಿರೋ ಅಷ್ಟು ಇಚ್ಛೆಯ ಅವಿದ್ಯೆಯಾಗುವುದು. ಕಾಮನೆಯ ಬದಲು ಎದುರಿಸುವ ಶಕ್ತಿ ಬರುವುದು. ಹಳೆಯ ವೃತ್ತಿಗಳಿಂದ ನಿವೃತ್ತಿಯಾಗಿದ್ದೀರಾ? ....ಈ ಎಲ್ಲವೂ ಮುಂಬರುವ ಪ್ರಾಕ್ಟಿಕಲ್ ಪರೀಕ್ಷೆಯ ಪ್ರಶ್ನೆಗಳಾಗಿವೆ. ತಮ್ಮನ್ನು ಪೂರ್ಣ ಸ್ವಚ್ಛ/ಸ್ಪಷ್ಟ ಮತ್ತು ಮಾಯೆಯನ್ನೂ ಕಾಳಜಿ ಮಾಡದ ಶಕ್ತಿ ತಮ್ಮಲ್ಲಿ ಧಾರಣೆ ಮಾಡಿಕೊಂಡಿರುವಿರಾ? ಸ್ವಯಂ ಮತ್ತು ಸಮಯ ಎರಡರ ಪರಿಚಯ ಸರಿಯಾಗಿ, ಸ್ಪಷ್ಟವಾಗಿ ಗೊತ್ತಾಗಿದೆಯಾ? ಇದೆಲ್ಲವನ್ನೂ ಸ್ವಲ್ಪ ಮಾಡಿರುವಿರಾ ಅಥವಾ ಸ್ವಲ್ಪ ಉಳಿದಿದೆಯಾ? ಎಲ್ಲಾ ಮಾತುಗಳ ಪ್ರಾಪ್ತಿ ಮಾಡಿ ತೃಪ್ತ ಆತ್ಮನಾಗಿ ಪರೀಕ್ಷೆಯ ಕೊಠಡಿಗೆ ಹೋಗಲು ಸಾಹಸಿಗರು & ಶಕ್ತಿವಂತರಾಗಿದ್ದೇವೆ ಎನ್ನುವವರು ಕೈಎತ್ತಿ. ಎಲ್ಲಾ ಮಾತುಗಳ ಪರೀಕ್ಷೆ ಕೊಡಲು ಮತ್ತು ಗೌರವಯುತವಾಗಿ ತೇರ್ಗಡೆಯಾಗುವ ಸಾಹಸಿ ಮತ್ತು ಶಕ್ತಿವಂತರಾಗಿರುವವರು ಕೈಎತ್ತಿ. ಒಳ್ಳೆಯದು. ಇನ್ನು ಪ್ರ್ಯಾಕ್ಟಿಕಲ್ ಪೇಪರ್ ಫಲಿತಾಂಶವನ್ನು ನೋಡುವೆವು. ಯಾರು ಈ ತಿಂಗಳು ಗೌರವಯುತವಾಗಿ ತೇರ್ಗಡೆ ಹೊಂದುವ ಫಲಿತಾಂಶ ತೋರಿಸುವರು ಅವರಿಗೆ ಬಾಪ್ ದಾದಾ ವಿಶೇಷ ನೆನಪಿನ ಕಾಣಿಕೆಯನ್ನು ಕೊಡುವರು. ಆದರೆ ಕೇವಲ ಪಾಸಾಗುವುದಲ್ಲ ಗೌರವಯುತ ತೇರ್ಗಡೆಯಾಗಿರಬೇಕು. ತಮ್ಮ ಫಲಿತಾಂಶವನ್ನು ಬರೆದು ಕಳಿಸಿ ನಂತರ ಇಷ್ಟು ದೊಡ್ಡ ಗುಂಪಿನಿಂದ ಎಷ್ಟು ಜನ

ಗೌರವಯುತವಾಗಿ ತೇರ್ಗಡೆ ಹೊಂದುವರು ಎಂದು ನೋಡುವೆವು. ಆದರೆ ತಮ್ಮ ಜೊತೆಗಾರರಿಂದಲೂ ಸರ್ಟಿಫಿಕೇಟ್ ತೆಗೆದುಕೊಂಡಾಗ ನೆನಪಿನ ಕಾಣಿಕೆಯನ್ನು ಕೊಡುವೆವು. ಸಹಜವಾಗಿದೆಯಲ್ಲವೇ? ಸಾಹಸಿಗಳಾಗಿರುವಾಗ ಇದೇನು ಮಹಾ ಕಷ್ಟದ್ದು. ಸದಾ ನಾನು ವಿಜಯಮಾಲೆಯ ವಿಜಯರತ್ನವಾಗಿದ್ದೇನೆ ಎಂಬುದನ್ನು ನೆನಪಿನಲ್ಲಿಡಬೇಕು. ಈ ಸ್ಮೃತಿರುವುದರಿಂದ ಸೋಲಾಗುವುದಿಲ್ಲ. ಸಮಾಪ್ತಿಯಲ್ಲಿ ಪೂರ್ಣ ರೂಪದ ಬಲಿ ಏರುವುದು ಎಂದು ಎಲ್ಲರೂ ಹೇಳಿದ್ದರು. ಹಾಗಾದರೆ ಸಂಪೂರ್ಣ ಬಲಿಯಾಯಿತಾ? ಮಹಾಬಲಿಯಾಗಿ ಹೋಗುತ್ತಿರುವಿರೋ ಅಥವಾ ಇನ್ನೂ ಸ್ವಲ್ಪ ಸಾಯುವುದಿದೆಯೋ? ಮಹಾಬಲಿಯ ಮುಂದೆ ಯಾವುದೇ ಮಾಯೆಯ ಬಲ ನಡೆಯುವುದಿಲ್ಲ. ಈ ರೀತಿ ನಿಶ್ಚಯಮಾಡಿಕೊಂಡು ಹೋಗುತ್ತಿರುವಿರಲ್ಲವೇ? ಫಲಿತಾಂಶವನ್ನು ನೋಡುವೆವು ನಂತರ ಬಾಪ್ ದಾದಾ ಅಂತಹ ವಿಜಯಿರತ್ನಗಳಿಗೆ ಒಂದು ಅಲೌಕಿಕ ಮಾಲೆಯನ್ನು ಹಾಕುವರು. ಒಳ್ಳೆಯದು.

ಅವ್ಯಕ್ತ ಮುರಳಿ 05-12-1970.

***ಪ್ರತಿಜ್ಞೆ ಮಾಡುವವರಿಗೆ ಮಾಯೆಯ ಸವಾಲು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಜ್ಞಾನ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಈಗೀಗ ಧ್ವನಿಗೆ ಅತೀತವಾಗುವ ಮತ್ತು ಈಗೀಗ ಧ್ವನಿಯಲ್ಲಿ ಬರುವ ಅಭ್ಯಾಸವನ್ನು ಮಾಡಿದ್ದೇನೆ.

2. ನಾನು ಬಾಪ್ ಸಮಾನ ವಿಜಯೀ ಸ್ವರೂಪ.

3. ನಾನು ಜ್ಞಾನಮೂರ್ತಿ ಮತ್ತು ಗುಣಮೂರ್ತಿ.

4. ನಾನು ಮೂರನೆಯ ನೇತ್ರದಿಂದ ಪರಿಶೀಲಿಸಿ ಮಾಯೆಯ ಸರ್ವ ರೂಪಗಳನ್ನು ಸಮಾಪ್ತಿ ಮಾಡಿದ್ದೇನೆ.

5. ನಾನು ಸರ್ವಪ್ರಾಪ್ತಿಗಳಿಂದ ಎಲ್ಲರನ್ನೂ ತೃಪ್ತಪಡಿಸಿರುವ ಇಚ್ಛಾಮಾತ್ರಂ ಅವಿದ್ಯಾ ಸ್ವರೂಪ.

6. ನಾನು ಗೌರವಯುತವಾಗಿ ತೇರ್ಗಡೆಯಾಗಿ ಬಾಪ್ ದಾದಾರವರಿಂದ ಅಲೌಕಿಕ ಮಾಲೆಯನ್ನು ಹಾಕಿಸಿಕೊಂಡಿರುವ ವಿಜಯೀರತ್ನ.